# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ, ಕೆಂಪೇಗೌಡನಗರ ಉಪವಿಭಾಗ
ಚಿಕ್ಕಪೇಟೆ ವಿಭಾಗ, ಬೆಂಗಳೂರು.

ಸ.ಕಾ.ನಿ.ಅ(ಕೆ.ಗೌ.ನ)/ಪಿ.ಆರ್/ 548 /2021-22, ದಿನಾಂಕ : 12-01-22

ದಿನಾಂಕ: 05-01-2022 ರಂದು ಈ ಉಪವಿಭಾಗದ ವಾರ್ಡ್ ಸಂಖ್ಯೆ: 143ರ ವಾರ್ಡ್ ಕಛೇರಿಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡಾವಳಿಗಳು ಈ ಕೆಳಕಂಡಂತಿರುತ್ತದೆ.

**ಉಪಸ್ಥಿತರು:**

| ಕ್ರ ಸಂ. | ಹೆಸರು | ಹುದ್ದೆ | ಮೊಬೈಲ್ ಸಂಖ್ಯೆ |
|---|---|---|---|
| 1 | ಶ್ರೀ. ಉಮಾಶಂಕರ್ | ನೋಡಲ್ ಅಧಿಕಾರಿಗಳು ಹಾಗೂ ಉಪನಿರ್ದೇಶಕರು ನಗರ ಯೋಜನೆ (ದಕ್ಷಿಣ) | 9480684418 |
| 2 | ಶ್ರೀಮತಿ. ಶಿಲ್ಪ.ಎನ್ | ಕಾರ್ಯದರ್ಶಿ ಹಾಗೂ ಕಿರಿಯ ಅಭಿಯಂತರರು ವಾರ್ಡ್ ಸಂಖ್ಯೆ:143 | 9480688143 |
| 3 | ಬಸವನಗುಡಿ ರೆಸಿಡೆಂಟ್ಸ್ ವೆಲ್‌ಫೇರ್ ಅಸೋಸಿಯೇಷನ್ | ಸದಸ್ಯರು | 8217636732 |
| 4 | ಶ್ರೀ.ರಾಮಯ್ಯಂಗಾರ್ ರಸ್ತೆ ರೆಸಿಡೆಂಟ್ಸ್ ವೆಲ್‌ಫೇರ್ ಅಸೋಸಿಯೇಷನ್ | ಸದಸ್ಯರು | 9901066586 |
| 5 | ಎಂ.ಎಂ.ವಿ ರಸ್ತೆ ರೆಸಿಡೆಂಟ್ಸ್ ವೆಲ್‌ಫೇರ್ ಅಸೋಸಿಯೇಷನ್ | ಸದಸ್ಯರು | 9448387878 |
| 6 | ಚಿಕ್ಕಣ್ಣ ಗಾರ್ಡನ್ ರೆಸಿಡೆಂಟ್ಸ್ ವೆಲ್‌ಫೇರ್ ಅಸೋಸಿಯೇಷನ್ | ಸದಸ್ಯರು | 9448508638 |
| 7 | Annapurna | ಶಂಕರಪುರಂ ಪೋಲೀಸ್ ಠಾಣೆ | |

ದಿನಾಂಕ: 05-01-2022 ರಂದು ನಡೆದ ವಾರ್ಡ್ -143 ರ ಸಮಿತಿ ಸಭೆಯ ನಡಾವಳಿಗಳು:

ಮಾನ್ಯ ನೋಡಲ್ ಅಧಿಕಾರಿಗಳು ಹಾಗೂ ಅಧ್ಯಕ್ಷರು ರವರ ಅನುಮತಿಯೊಂದಿಗೆ ಕಾರ್ಯದರ್ಶಿಗಳು ಹಾಗೂ ಸಹಾಯಕ ಅಭಿಯಂತರರು ಸಭೆಯಲ್ಲಿ ಹಾಜರಿದ್ದ ರೆಸಿಡೆಂಟ್ಸ್ ವೆಲ್‌ಫೇರ್

ಅಸೋಸಿಯೇಷನ್‌ಗಳ ಅಧ್ಯಕ್ಷರು ಹಾಗೂ ವಿವಿಧ ಇಲಾಖೆಗಳ ಅಧಿಕಾರಿಗಳನ್ನು ಸ್ವಾಗತಿಸುವ ಮೂಲಕ ಸಭೆಯನ್ನು ಪ್ರಾರಂಭಿಸಲಾಯಿತು.

ಮೊದಲು ಎಂ.ಎಂ.ವಿ.ರಸ್ತೆ ರೆಸಿಡೆಂಟ್ಸ್ ವೆಲ್‌ಫೇರ್ ಅಸೋಸಿಯೋಷನ್‌ನ ಶ್ರೀ. ವೆಂಕಟೇಶ್ ರವರು ಮಾತನಾಡಿ ಎಂ.ಎಮ.ವಿ. ರಸ್ತೆಯಲ್ಲಿ ಕಟ್ಟಡ ನಿರ್ಮಾಣ ಮಾಡುತ್ತಿರುವವರು ಕಟ್ಟಡಕ್ಕೆ ಬಳಸುವ ಸಾಮಗ್ರಿಗಳನ್ನು ರಸ್ತೆಯಲ್ಲಿ ಹಾಕಿಕೊಂಡಿದ್ದು ವಾಹನ ಸವಾರರಿಗೆ ಮತ್ತು ಪಾದಚಾರಿಯ ಮಾರ್ಗದವರಿಗೆ ತುಂಬಾ ತೊಂದರೆಯಾಗುತ್ತಿರುವುದಾಗಿ ತಿಳಿಸಿದರು. ಮತ್ತು ನ್ಯಾಷನಲ್ ಹೈ ಸ್ಕೂಲ್ ರಸ್ತೆ ಹಾಗೂ ಎಂ.ಎಂ.ವಿ. ರಸ್ತೆಗಳು ಸೇರುವ ಸ್ಥಳದಲ್ಲಿ ರಸ್ತೆ ಉಬ್ಬು (Road Hump) ನ್ನು ಹಾಕಬೇಕೆಂದು ಹಾಗೂ ಡಯಾನಗಲ್ ರಸ್ತೆಯ ಪಾದಚಾರಿ ಮಾರ್ಗವನ್ನು ಸರಿಪಡಿಸಬೇಕೆಂದು ಸಭೆಯಲ್ಲಿ ಕೋರಿದರು. ಈ ವಿಷಯವಾಗಿ ಮಾನ್ಯ ನೋಡಲ್ ಅಧಿಕಾರಿಗಳು ಇವುಗಳಿಗೆ ಸಂಬಂಧಿಸಿದಂತೆ ಸೂಕ್ತ ಕ್ರಮ ಕೈಗೊಳ್ಳುವಂತೆ ವಾರ್ಡ್ ಅಭಿಯಂತರರಿಗೆ ಸೂಚಿಸಿದರು.

ನಂತರ ಬಸವನಗುಡಿ ರೆಸಿಡೆಂಟ್ಸ್ ವೆಲ್‌ಫೇರ್ ಅಸೋಸಿಯೋಷನ್‌ನ ಶ್ರೀ.ರಾಜು ರವರು ಮಾತನಾಡಿ ಈ ಹಿಂದಿನ ಸಭೆಗಳಲ್ಲಿ ಪ್ರಸ್ತಾಪಿಸಲಾಗಿದ್ದ ಈ ಕೆಳಕಂಡ ವಿಷಯಗಳ ಬಗ್ಗೆ ಕ್ರಮ ಕೈಗೊಳ್ಳುವಂತೆ ಸಭೆಯಲ್ಲಿ ಕೋರಿದರು. ಅವುಗಳೆಂದರೆ

1).ಎಂ.ಎನ್.ಕೃಷ್ಣರಾವ್ ರಸ್ತೆಯ ಪಾದಚಾರಿ ಮಾರ್ಗದಲ್ಲಿ ಬೊಲ್ಯಾರ್ಡ್ಸ್‌ಗಳನ್ನು ಅಳವಡಿಸುವುದು.

2).ಕೆ.ಆರ್. ರಸ್ತೆಯಲ್ಲಿನ ಪಾದಚಾರಿ ಮಾರ್ಗದಲ್ಲಿರುವ ನರ್ಸರಿಯನ್ನು ತೆರವುಗೊಳಿಸುವುದು..

3).ಸರ್ವೇಯರ್ ರಸ್ತೆ ಕನ್ಸರ್‌ವೆನ್ಸಿಯಲ್ಲಿರುವ ಮಾಂಸಾಹಾರಿ ಹೋಟೆಲ್ ಅನ್ನು ತೆರವುಗೊಳಿಸುವುದು.

ಈ ಮೇಲಿನ ಎಲ್ಲಾ ವಿಷಯಗಳ ಬಗ್ಗೆ ಸಭೆಯಲ್ಲಿ ಚರ್ಚಿಸಲಾಗಿ ಸಂಬಂಧ ಪಟ್ಟ ಇಲಾಖೆಗಳೊಂದಿಗೆ ಚರ್ಚಿಸಿ ಸೂಕ್ತ ಕ್ರಮ ಕೈಗೊಳ್ಳುವಂತೆ ಮಾನ್ಯ ನೋಡಲ್ ಅಧಿಕಾರಿಗಳು ವಾರ್ಡ್ ಅಭಿಯಂತರರಿಗೆ ಸೂಚಿಸಿದರು.

ನಂತರ ರಾಮಯ್ಯಂಗಾರ್ ರಸ್ತೆ ರೆಸಿಡೆಂಟ್ಸ್ ವೆಲ್‌ಫೇರ್ ಅಸೋಸಿಯೋಷನ್‌ನ ಶ್ರೀ.ಓ.ವಿ.ಜಯಕುಮಾರ್ ರವರು ಮಾತನಾಡಿ ಚಿಕ್ಕಣ್ಣ ಗಾರ್ಡನ್ ವ್ಯಾಪ್ತಿಯಲ್ಲಿ ರಸ್ತೆ ಗುಂಡಿಗಳನ್ನು ಮುಚ್ಚಿ ಸುಗಮ ಸಂಚಾರಕ್ಕೆ ಅನುವು ಮಾಡಿಕೊಟ್ಟಿರುವುದಕ್ಕೆ ಸ್ಥಳೀಯ ವಾಸಿಗಳು ಧನ್ಯವಾದವನ್ನು ತಿಳಿಸಿರುವುದಾಗಿ ಸಭೆಗೆ ತಿಳಿಸಿದರು. ಮಾತು ಮುಂದುವರೆಸುತ್ತಾ ಶಂಕರಪುರಂನ ರಂಗದೊರೈ ಆಸ್ಪತ್ರೆ ರಸ್ತೆ, ವಿ.ವಿ.ಪುರಂನ

ಎಲ್.ಬಿ.ಎಫ್.ರಸ್ತೆ, ಬಸಪ್ಪ ವೃತ್ತಗಳಲ್ಲಿ  ರಸ್ತೆಗಳು ಹಾಳಾಗಿದ್ದು ದುರಸ್ಥಿ ಮಾಡಿ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಬೇಕೆಂದು ಸಭೆಯ ಗಮನಕ್ಕೆ ತಂದರು, ಮಾನ್ಯ ನೋಡಲ್ ಅಧಿಕಾರಿಗಳು ಈ ಬಗ್ಗೆ ಚರ್ಚಿಸಿ ಸೂಕ್ತ ಕ್ರಮ ಕೈಗೊಳ್ಳುವಂತೆ ವಾರ್ಡಿನ ಅಭಿಯಂತರರಿಗೆ ತಿಳಿಸಿದರು.

ನಂತರ ಕಾರ್ಯದರ್ಶಿಗಳ ವಂದನಾರ್ಪಣೆಯೊಂದಿಗೆ ವಾರ್ಡ್ ಸಮಿತಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕಾರ್ಯದರ್ಶಿಗಳು ಹಾಗೂ
ಸಹಾಯಕ ಅಭಿಯಂತರರು
ವಾರ್ಡ್ –143 ವಿ. ವಿ.ಪುರಂ

ನೋಡಲ್ ಅಧಿಕಾರಿಗಳು
ವಾರ್ಡ್ ಸಂಖ್ಯೆ: 143 ಹಾಗೂ
ಉಪನಿರ್ದೇಶಕರು ನಗರ ಯೋಜನೆ (ದಕ್ಷಿಣ)